(SMT. BASAVARAJESWARI)

of March 1962 in Hatti Gold Mines Hospital (Yearwise figures may be furnished);

(*b*) the amount of grant as well as medicines that the previous Hyderabad Government used to give to this hospital;

(*c*) the amount sanctioned by this Government stating the reasons;

(*d*) if stopped, the reasons for stopping the grants?

A.—Sri K. NAGAPPA ALVA (Minister for Health).—

(*a*) The number of patients treated in the Hatti Gold Mines Hospital during the 3 years from 1958 to 1960 are as follows:—

Year	Employees	Non-Employees	Total
1958	2593	7232	9825
1959	2917	8030	10947
1960	2806	8656	11462

(*b*) Not known.

(*c*) Rs. 1,500 for year ending 31st March 1960. The maximum amount of grant-in-aid admissible under the Rules is ¼ of the total annual maintenance expenditure limited to the amount of deficit.

(*d*) The payment of grant-in-aid was stopped on the report of the District Surgeon, Raichur.

ಶ್ರೀಮತಿ ಬಸವರಾಜೇಶ್ವರಿ.–1,500 ರೂಪಾಯಿಗಳ ಗ್ರ್ಯಾಂಟನ್ನು ಜಿಲ್ಲಾ ಸರ್ಜನ್‌ರವರ ವರದಿಯ ಪ್ರಕಾರ ನಿಲ್ಲಿಸಿದ್ದಾರೆಯೇ?

ಶ್ರೀ ಕೆ. ನಾಗಪ್ಪ ಅಳ್ವ.–ಈ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಬರುವ ಕೆಲಸಗಾರರ ಮತ್ತು ಸಾರ್ವಜನಿಕರ ಸಂಖ್ಯೆ ಕಡಿಮೆಯಾಗುತ್ತಾ ಬಂದುದರಿಂದ ಹಣ ಕೊಡುವ ಅಗತ್ಯವಿಲ್ಲವೆಂದು ವರದಿ ಬಂದ ಪ್ರಕಾರ ನಿಲ್ಲಿಸಲಾಗಿದೆ.

ಶ್ರೀಮತಿ ಬಸವರಾಜೇಶ್ವರಿ.—ಉತ್ತರದಲ್ಲಿ ಒದಗಿಸಿರುವ ಅಂಕಿ ಸಂಖ್ಯೆಗಳ ಪ್ರಕಾರ ನೌಕರೇತರರು ಈ ಆಸ್ಪತ್ರೆಯಲ್ಲಿ ಹೆಚ್ಚು ಸೌಲಭ್ಯ ಪಡೆಯುತ್ತಿದ್ದಾರೆಂದು ವರದಿ ಬಂದಿದೆಯೇ?

ಶ್ರೀ ಕೆ. ನಾಗಪ್ಪ ಅಳ್ವ.—ಅದನ್ನು ವಿಚಾರ ಮಾಡಬೇಕು.

ಶ್ರೀಮತಿ ಬಸವರಾಜೇಶ್ವರಿ.—1,500 ರೂಪಾಯಿ ಗಳನ್ನು ಮಂಜೂರು ಮಾಡಿದ್ದುದು ಒಂದು ವರ್ಷಕ್ಕೆ?

ಶ್ರೀ ಕೆ. ನಾಗಪ್ಪ ಅಳ್ವ.—ಹೌದು.

ಶ್ರೀಮತಿ ಬಸವರಾಜೇಶ್ವರಿ.—ಹಿಂದೆ ಶ್ರೀ ಆರ್. ಎಂ. ಪಾಟೀಲ್‌ರವರು ಮಂತ್ರಿಗಳಾಗಿದ್ದಾಗ ಒಬ್ಬ ಲೇಡಿ ಡಾಕ್ಟರನ್ನೊದಗಿಸಬೇಕೆಂದು ಮನವಿಮಾಡಿತ್ತು. ಇದನ್ನು ಪರಿಶೀಲನೆ ಮಾಡಿದ್ದೀರಾ?

ಶ್ರೀ ಕೆ. ನಾಗಪ್ಪ ಅಳ್ವ.—ತಮ್ಮ ನಲಹೆಯನ್ನು ಆಲೋಚನೆ ಮಾಡುತ್ತೇವೆ.

ಶ್ರೀಮತಿ ಬಸವರಾಜೇಶ್ವರಿ.—ಅಲ್ಲಿ ಸರಿಯಾದ ಎಕ್ಸ್‌ಪ್‌ಮೆಂಟ್ ಇರುವ ಆಸ್ಪತ್ರೆ ಬೇರೆ ಕಡೆ ಇಲ್ಲದಿರುವುದರಿಂದ ಗ್ರ್ಯಾಂಟನ್ನು ಕೊಟ್ಟು ಹೊರಗಿನವರು ಸಹಾಯಮಾಡಲು ಅವಕಾಶ ಮಾಡುತ್ತೀರಾ?

ಶ್ರೀ ಕೆ. ನಾಗಪ್ಪ ಅಳ್ವ.—ವಿಚಾರ ಮಾಡುತ್ತೇವೆ.

Sri K. LAKKAPPA.—Supplementary to (*d*)—What is the report of the District Surgeon?

Mr. SPEAKER.—It is already answered.

Starting of Medical Schools and Colleges in the State during the Third Five-Year Plan.

*Q.–178. Smt. BASAVARAJESWARI (Manvi).—

Will the Government be pleased to state:—

(*a*) the total number of Medical Colleges and Schools that Government intend to start during the Third Five-Year Plan in the State;

(*b*) the places where they have already been started;

(*c*) whether there is any proposal before the Government to start either a Medical College or a Medical School at Raichur;

(*d*) if so, the reason for not considering it so far?

A.–Sri K. NAGAPPA ALVA (Minister for Health).—

(*a*) Two Medical Colleges.
(*b*) One Medical College at Bellary.
(*c*) Not so far.
(*d*) Does not arise.

ಶ್ರೀಮತಿ ಬಸವರಾಜೇಶ್ವರಿ.—ಇನ್ನೊಂದು ಮೆಡಿಕಲ್ ಕಾಲೇಜನ್ನು ಎಲ್ಲಿ ಆರಂಭಿಸಬೇಕೆಂದು ಆಲೋಚನೆ ಮಾಡುತ್ತಿದ್ದೀರಿ?

ಶ್ರೀ ಕೆ. ನಾಗಪ್ಪ ಅಳ್ವ.—ಆ ಪ್ರಶ್ನೆ ಈಗ ಬರುವುದಿಲ್ಲ. ಹಣದ ಅಭಾವದಿಂದ ಈಗ ಒಂದನ್ನು ಮಾತ್ರ ಆರಂಭಿಸಲು ನಿರ್ಧರಿಸಲಾಗಿದೆ.

ಶ್ರೀಮತಿ ಬಸವರಾಜೇಶ್ವರಿ.–ಹಿಂದೆ ಗುಲ್ಬರ್ಗಾಕ್ಕೆ ಇಂಜಿನಿಯರಿಂಗ್ ಕಾಲೇಜನ್ನು ಕೊಡುವಾಗ ಮೆಡಿಕಲ್ ಕಾಲೇಜನ್ನೂ ಅಲ್ಲಿಗೆ ಕೊಡಬಹುದೆಂಬ ಒಂದು ಅಂಡರ್ ಸ್ಟ್ಯಾಂಡಿಂಗ್ ಸರ್ಕಾರದಲ್ಲಿತ್ತಲ್ಲವೆ?

ಶ್ರೀ ಕೆ. ನಾಗಪ್ಪ ಅಳ್ವ.—ಅದು ನನ್ನ ಗಮನಕ್ಕೆ ಬಂದಿಲ್ಲ.

Sri G. V. GOWDA.—When two Medical Colleges are proposed to be started during the Third Plan,

may I know whether no provision is made for their establishment ?

Sri K. NAGAPPA ALVA.—In the Third Plan, provision has been made only for one college and the provision is Rs. 80 lakhs.

ಶ್ರೀ ಶರಣಪ್ಪ.—ಗುಲ್ಬರ್ಗ ಡಿವಿಜ್ಞನಲ್ಲಿ ಮೆಡಿಕಲ್ ಕಾಲೇಜನ್ನು ಪ್ರಾರಂಭಿಸುವ ಯೋಚನೆಯಿದೆಯೆ ?

ಶ್ರೀ ಕೆ. ನಾಗಪ್ಪ ಆಳ್ವ.—ಸದ್ಯಕ್ಕೆ ಇಲ್ಲ.

ಶ್ರೀ ಸಿ. ಬೆ. ಮುಕ್ಕಣ್ಣಪ್ಪ.—ಇನ್ನೊಂದು ಕಾಲೇಜನ್ನು ಸದ್ಯಕ್ಕೆ ಪ್ರಾರಂಭಿಸುವುದಿಲ್ಲವೆಂದು ಹೇಳಿದರು. ಆ ರೀತಿ ತೀರ್ಮಾನ ಮಾಡಿರುವುದು ಯಾವಾಗ ?

ಶ್ರೀ ಕೆ. ನಾಗಪ್ಪ ಆಳ್ವ.—ಪ್ಲಾನ್ ಪ್ರಾವಿಷನ್ ಏನಿದೆ ಅದನ್ನು ತಿಳಿಸಿದ್ದೇನೆ.

Sri C. J. MUCKANNAPPA.—In view of the fact that the Plan is flexible, will Government consider the desirability of starting another Medical College in the State ?

Sri K. NAGAPPA ALVA.—That is a suggestion for action.

Sri ANNA RAO GANAMUKHI.—Do Government intend to start any Medical College in the third or fourth year of the Third Plan ?

Sri B. D. JATTI (Minister for Finance).—According to the Third Plan, there is no provision for starting a second Medical College. If by chance this Hon'ble House agrees to increase the resources and if the All-India Medical Council has no objection, then we will consider.

Sri C. M. REVANA SIDDAIAH.—Is the Bellary College one among the two colleges proposed in the Third Plan ?

Sri B. D. JATTI.—Only one college is to be started and that is the Bellary College.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಖಾನಗಿಯವರು ಈ ಕಾಲೇಜನ್ನು ತೆರೆಯಲು ಮುಂದೆ ಬಂದರೆ ಸಹಾಯಮಾಡುತ್ತೀರಾ ?

Sri K. NAGAPPA ALVA.—That is a suggestion for action.

Sri K. S. SURYANARAYANA RAO.—In view of the fact that the Finance Minister has said that more taxation measures are likely to come before the House and that the resources are likely to be augmented during the current and the coming year, will Government consider the desirability of starting another college ?

Sri B. D. JATTI.—I did not mention the words ' taxation measures '. It is the imagination of the hon. Member.

ಶ್ರೀಮತಿ ಬನವರಾಜೇಶ್ವರಿ.—ಸರ್ಕಾರಕ್ಕೆ ಅನುಕೂಲವಾದಾಗ ಗುಲ್ಬರ್ಗಾಕ್ಕೆ ಕೊಡಬೆ ರಾಯಜೂರಿಗೆ ಕೊಡಲು ಮನಸ್ಸು ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಎಲ್ಲರ ವಿಚಾರವನ್ನೂ ಆಲೋಚಿಸಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಗೋಪಾಲ ಸಾಲೆನ್ನ.—ಎರಡು ಮೆಡಿಕಲ್ ಕಾಲೇಜುಗಳನ್ನು ಆರಂಭಿಸಬೇಕೆಂದು ಮನಸ್ಸು ಮಾಡಿದಾಗ ಮಂಗಳೂರಿನಲ್ಲಿ ಬೇಕಾದ ಸೌಲಭ್ಯವಿದೆ ಎಂಬ ಕಾರಣದಿಂದ ಅಲ್ಲೊಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಬಹುದೆಂಬ ಅಭಿಪ್ರಾಯ ಆಗ ಸರ್ಕಾರಕ್ಕಿತ್ತಲ್ಲವೆ ? ಅದೇನಾಯಿತು ?

ಶ್ರೀ ಕೆ. ನಾಗಪ್ಪ ಆಳ್ವ.—ಆ ತರಹದ ಸೂಚನೆ ಬಂದಿದೆ.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ.—ಬಿಜಾಪುರ ಜಿಲ್ಲೆಗೆ ಎರಡನೆಯ ಶಾಲೆ ಕೊಡುವ ಅವಶ್ಯಕತೆಯಿದೆ. ಇದನ್ನು ವಿಚಾರ ಮಾಡುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ತಮ್ಮ ಸೂಚನೆ ಗಮನದಲ್ಲಿದೆ.

ಶ್ರೀಮತಿ ಬನವರಾಜೇಶ್ವರಿ.—ಇಂಜಿನಿಯರಿಂಗ್ ಕಾಲೇಜನ್ನು ಗುಲ್ಬರ್ಗಾಕ್ಕೆ ಕೊಡುವಾಗ ರಾಯಜೂರಿಗೆ ಕೊಡುತ್ತಾರೆಂಬ ಅಂಡರ್‌ಸ್ಟ್ಯಾಂಡಿಂಗ್ ಮೇಲೆ ಅನೇಕರು ಬಹಳ ಧಾರಾಳವಾಗಿ ಹಣ ಕಾಂಟ್ರಿಬ್ಯೂಟ್ ಮಾಡಿದರು. ಅದೇ ಪ್ರಕಾರ ಮೆಡಿಕಲ್ ಕಾಲೇಜನ್ನೂ ಕೊಡಬಹುದೆಂದು ಬಹಳ ಕೆಲಸ ಮಾಡಿದ್ದಾರೆ. ಇದನ್ನು ಗಮನಿಸಿ ರಾಯಜೂರು ವಿಚಾರವನ್ನು ಗಮನಿಸುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ಅಂಡರ್‌ಸ್ಟ್ಯಾಂಡಿಂಗ್ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀಮತಿ ನಾಗರತ್ನಮ್ಮ.—ಗುಲ್ಬರ್ಗ ಮತ್ತು ರಾಯಜೂರು—ಈ ಎರಡು ಕಡೆಗಳಲ್ಲಿ ಎಲ್ಲಿಗೆ ಕೊಟ್ಟರೂ ಸಮಾಧಾನವಿರುವುದಿಲ್ಲ. ಆದುದರಿಂದ ಚಿತ್ರದುರ್ಗಕ್ಕೆ ಕೊಡುತ್ತೀರಾ ?

(ನಗು.—ಉತ್ತರವಿಲ್ಲ.)

Sri ANNA RAO GANAMUKHI.—Is it not a fact that the Jatti Ministry has nearly agreed to give one more Medical College to a place where the people come forward with a donation of Rs. 20 lakhs ?

Sri B. D. JATTI.—Government generally does not nearly agree ; it agrees completely or it does not agree.

2-00 P.M.

ಶ್ರೀ ಎಸ್. ಶಿವಪ್ಪ.—ಈಗ ನಮ್ಮ ದೇಶಕ್ಕೆ ಅಗತ್ಯವಾಗಿ ಬೇಕಾಗಿರತಕ್ಕ ಡಾಕ್ಟರುಗಳ ಕೊರತೆಯನ್ನು ನಿವಾರಣೆ ಮಾಡುವುದಕ್ಕೆ ಇನ್ನೆಷ್ಟು ಕಾಲೇಜುಗಳನ್ನು ಸ್ಥಾಪನೆ ಮಾಡಿದರೆ ಸಾಕಾಗುತ್ತದೆ ?

ಶ್ರೀ ಎಸ್. ಆರ್. ಕಂಠಿ.—ಈಗಿರತಕ್ಕ ಕಾಲೇಜುಗಳನ್ನೇ ಎಲ್ಲಾ ರೀತಿಯ ಅಭಿವೃದ್ಧಿ ಸಾಧನೆಗಳನ್ನು ಒದಗಿಸಿ ಮುಂದುವರಿಸಿದರೆ ಇವುಗಳಿಂದಲೇ ಮಾಡುವುದಕ್ಕೆ ಸಾಧ್ಯವಿದೆ. ಇನ್ನೊಂದು ಕಾಲೇಜು ಸಿಕ್ಕಿದರೆ ನಮ್ಮ ಕೆಲಸ ಪರಿಪೂರ್ಣವಾಗಿ ಕಾರ್ಯಗತವಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಮೂರನೆಯ ಪ್ಲಾನಿನಲ್ಲಿ 3 ಕಾಲೇಜುಗಳನ್ನು ತೆರೆಯಲು ಅವಕಾಶ ಮಾಡಿದೆಯಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಬಂದು ಕಾಲೇಜಿಗೆ ಮಾತ್ರ.

Mr. SPEAKER.—Question hour is over. Short Notice Question No. 38.

SHORT NOTICE QUESTION AND ANSWER

Spread of Cholera in Hubli.

Q.—38. Sri R. A. KOPPAL (Hubli City).—

Will the Government be pleased to state :—

(*a*) whether they are aware that about thirty people have died as a result of spread of cholera in Hubli ;

(*b*) whether it is a fact that besides the above deaths, about four hundred people are attacked by the above disease ;

(*c*) whether it is also a fact that they have not taken any step to stem the tide of this attack ?

A.—Sri K. NAGAPPA ALVA (Minister for Health).—

(*a*) There were 26 deaths up to 27th July 1962.

(*b*) There were 248 attacks in Hubli.

(*c*) No. Both the Departments of Medical and Public Health have taken urgent necessary measures in this behalf.

ಶ್ರೀ ಆರ್. ಎ. ಕೊಪ್ಪಲ್.—ಸರ್ಕಾರದ ವೈದ್ಯ ಕೀಯ ಹಾಗೂ ಜನಾರೋಗ್ಯ ಶಾಖೆಗಳು ಶೀಘ್ರ ವಾಗಿ ಕಾರ್ಯಕ್ರಮ ಕೈಕೊಂಡಿವೆಯೆಂದು ಹೇಳಿದ್ದೀರಿ. ಅವರು ಕೈ ಕೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಕೆ. ನಾಗಪ್ಪ ಆಳ್ವ.—ಅದಕ್ಕೆ ಬೇಕಾದ ಎಲ್ಲಾ ಕೆಲಸಗಳನ್ನೂ ಎರಡು ಇಲಾಖೆಗಳವರೂ, ಸಂಬಂಧಪಟ್ಟ ಅಧಿಕಾರಿಗಳೂ ಎಲ್ಲರೂ ಸೇರಿ ಕೈಕೊಂಡಿದ್ದಾರೆ.

ಶ್ರೀ ಆರ್. ಎ. ಕೊಪ್ಪಲ್.—ಏನೇನು ಮಾಡಿದ್ದಾ ರೆಂಬುದನ್ನು ಸವಿಸ್ತಾರವಾಗಿ ಹೇಳುತ್ತೀರಾ ?

Sri K. NAGAPPA ALVA.—Strict sanitary control is being exercised on food and drink catering establishments ; educative pamphlets have been distributed ; continuous announcement on loud speakers have been made ; chlorination of water supply has been steepped up ; disinfections have been promptly undertaken ; City area has been declared under the Epedimic Diseases Act ; fish market and city bazaars have closed ; city area has been thoroughly cleaned up and arrangements have been made for proper treatment at proper time.

ಶ್ರೀ ಆರ್. ಎ. ಕೊಪ್ಪಲ್.—ಇದಾದ ಮೇಲೆ ಹುಬ್ಬಳ್ಳಿ ಕಾಲೇಜು ಹಾಸ್ಪಿಲನಲ್ಲಿ ಕಾಲರಾ ತಗಲ ನರಿಯಾದ ಉಪಚಾರವಿಲ್ಲದೆ ಮರಣ ಹೊಂದಿರುವ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ಗೊತ್ತಿಲ್ಲ.

ಶ್ರೀ ಆರ್. ಎ. ಕೊಪ್ಪಲ್.—27ನೆಯ ತಾರೀಖಿನ ವರೆಗೆ 26 ಜನರು ಮರಣ ಹೊಂದಿದರೆಂದರೆ ಕಾಲರಾ ಪ್ರಾರಂಭವಾದುದು ಯಾವಾಗ ?

ಶ್ರೀ ಕೆ. ನಾಗಪ್ಪ ಆಳ್ವ.—ಜೂಲೈಗೆ ಮೊದಲೇ.

ಶ್ರೀ ಸಿ. ಎಸ್. ಹುಲ್‌ಕೋಟಿ.—ಹುಬ್ಬಳ್ಳಿಯಲ್ಲಿ ಎಷ್ಟು ಜನರಿಗೆ ಇನಾಕ್ಯೂಲೇಷನ್ ಮಾಡಿದ್ದೀರಿ ?

ಶ್ರೀ ಕೆ. ನಾಗಪ್ಪ ಆಳ್ವ.—ಒಂದು ಲಕ್ಷ 60 ಸಾವಿರ ಜನರಿಗೆ ಮಾಡಿದೆ.

ಶ್ರೀ ಸಿ. ಎಸ್. ಹುಲ್‌ಕೋಟಿ.—Isolated wards ಗಳೇ ಅಲ್ಲಿಲ್ಲವೆಂದು ತಮ್ಮ ಗಮನಕ್ಕೆ ಬಂದಿ ದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಆ ವಿಷಯ ನಮ್ಮ ಗಮನಕ್ಕೆ ಬಂದಿದೆ. Isolate ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡು ಇಂಥ ಕೇಸುಗಳನ್ನು Isolate ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದೆ.

ಶ್ರೀ ಸಿ. ಎಸ್. ಹುಲ್‌ಕೋಟಿ.—ಹುಬ್ಬಳ್ಳಿ ಡಿಸ್ಪೆನ್ಸರಿಯಲ್ಲಿ ಕಾಲರಾ ಚುಚ್ಚು ಮದ್ದು ಇಲ್ಲವೆಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಬಂದಿದೆ. ಇದರಿಂದಾಗಿ ತಾತ್ಕಾಲಿಕವಾಗಿ ಅಡಚಣೆ ಬಂದಿದ್ದರೂ. ಅದಕ್ಕೆ ಬೇಕಾದ ಏರ್ಪಾಡು ಕೂಡಲೇ ಮಾಡಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಈ ಮೂವತ್ತು ಜನರು ಎಷ್ಟು ದಿವಸದ ಅವಧಿಯಲ್ಲಿ ನತ್ತಿದ್ದಾರೆ.

ಶ್ರೀ ಕೆ. ನಾಗಪ್ಪ ಆಳ್ವ.—ಈ ರೋಗ ತಗಲಿದರೆ ಕೇವಲ ಎರಡು, ಮೂರು ದಿವಸಗಳಲ್ಲೇ ಅವರು ಮರಣ ಹೊಂದುತ್ತಾರೆ.

ಶ್ರೀ ಎಚ್. ರಾಚಯ್ಯ.—ಪ್ರಾರಂಭವಾದ ನಂತರ ಮೂವತ್ತು ಮರಣಗಳಾದುವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಒಟ್ಟು ಹದಿನೈದು ದಿವಸ ಗಳಲ್ಲಿ.

ಶ್ರೀ ಎಚ್. ರಾಚಯ್ಯ.—ಹುಬ್ಬಳ್ಳಿ ಕಾರ್ಪೊರೇಷನ್ನಿ ನಲ್ಲಿ qualified ಹೆಲ್ತ್ ಆಫೀಸರಿಲ್ಲದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ.

ಶ್ರೀ ಸಿ. ಎಸ್. ಹುಲ್‌ಕೋಟಿ.—ಹುಬ್ಬಳ್ಳಿ ತಾಲ್ಲೂ ಕಿನ ಸುತ್ತ ಮುತ್ತಲೂ ಯಾವ ಯಾವ ಗ್ರಾಮಗಳಲ್ಲಿ ಇನಾಕ್ಯುಲೇಷನ್ ಕ್ರಮ ಕೈ ಕೊಂಡಿದ್ದೀರಿ ?

Sri K. NAGAPPA ALVA.—That information is not available.

Mr. SPEAKER.—If the information is not available, the Minister may kindly say so.

Sri K. NAGAPPA ALVA.—Information is not available.

Mr. SPEAKER.—Question time is over. We will take up next item

---